# ಮೇರಾ ಜೂತಾ ಹೇ ಜಪಾನಿ

ಕೆಲವು ವರ್ಷಗಳ ಹಿಂದೆ ನಾನು ಅಲಾಸ್ಕಾಗೆ ಹೋಗಿದ್ದೆ. ಹಿಮನದಿಗಳು, ಬೃಹತ್ ಮಂಜುಗಡ್ಡೆಯ ಪರ್ವತಗಳು ಸಮುದ್ರದ ನೀರಿನಲ್ಲಿ ತೇಲುವುದನ್ನು ನೋಡುವುದೇ ಒಂದು ವಿಭಿನ್ನ ರೀತಿಯ ಆನಂದ. ಈ ಉದ್ದೇಶಕ್ಕಾಗಿ ಏಳು-ದಿನಗಳ ವಿಹಾರ ನೌಕೆಯಲ್ಲಿ ಪ್ರಯಾಣ ಮಾಡಬೇಕಾಗುತ್ತದೆ. ವಿಹಾರ ನೌಕೆಯು ತೇಲಾಡುವ ನಗರಕ್ಕಿಂತ ಕಡಿಮೆಯೇನಲ್ಲ. 3,000 ಪ್ರಯಾಣಿಕರು ಮತ್ತು 2,500 ನಾವಿಕ ತಂಡದವರಿರುತ್ತಾರೆ. ನಿಜಕ್ಕೂ ಅದು ಆತಿಥ್ಯದ ಔನ್ನತ್ಯ.

ನಾನು ಮೊದಲ ಬಾರಿಗೆ ವಿಹಾರ ನೌಕೆಗೆ ಕಾಲಿಟ್ಟಾಗ ವಿಹಾರ ನೌಕೆಯ ಮೇಲಿನ ಭೋಜನವು ಒಂದು ಅದ್ದೂರಿ ಸಂದರ್ಭ ಎಂಬುದರ ಕುರಿತು ನಾನು ಸಂಪೂರ್ಣ ಅಜ್ಞಾನಿಯಾಗಿದ್ದೆ. ಮೊದಲ ದಿನದಿಂದಲೇ, ಸಂಜೆಯಲ್ಲಿ, ನನ್ನ ಜಾಗಿಂಗ್ ಮುಗಿಸಿದ ತಕ್ಷಣ, ನಾನು ನೇರವಾಗಿ ಡೈನಿಂಗ್ ಹಾಲ್‌ಗೆ ನುಗ್ಗುತ್ತಿದೆ ಮತ್ತು ನನ್ನ ಆಸನ ಆಕ್ರಮಿಸಿಕೊಳ್ಳುತ್ತಿದ್ದೆ. ಸ್ವಲ್ಪ ಸಮಯದಲ್ಲೇ ಜಿನ್ಸ್, ಟಿ-ಶರ್ಟ್ ಮತ್ತು ಸ್ಪೋರ್ಟ್ಸ್ ಶೂಗಳನ್ನು ಧರಿಸಿರುವ ಅತಿಥಿ ನಾನೊಬ್ಬಳೇ ಎಂಬುದನ್ನು ಕಂಡುಕೊಂಡೆ. ಸ್ವಲ್ಪ ಹೊತ್ತಿಗೆ ಅಲ್ಲಿನ ಉಸ್ತುವಾರಿ ಅಧಿಕಾರಿ ನನ್ನ ಬಳಿ ಬಂದ ಮತ್ತು ನನ್ನ ಸ್ಪೋರ್ಟ್ಸ್ ಶೂಗಳನ್ನು ಟೇಬಲ್‌ನ ಕೆಳಗೆ ತೂರಿಸುವಂತೆ ಮನವಿ ಮಾಡಿಕೊಂಡು ಸುತ್ತಮುತ್ತಲಿನ ಸನ್ನಿವೇಶ ಕುರಿತು ನನ್ನನ್ನು ಜಾಗೃತಗೊಳಿಸಿದ. ಉಳಿದ ಪ್ರತಿಯೊಬ್ಬರೂ ಫಾರ್ಮಲ್ ಧಿರಿಸುಗಳಲ್ಲಿ ಅಚ್ಚುಕಟ್ಟಾಗಿ ಬಂದಿದ್ದರು ಮತ್ತು ನಾನೊಬ್ಬಳೇ ದಡ್ಡಿ, ಆಭರಣಗಳನ್ನು-ಧರಿಸಿದ್ದ ಎಲ್ಲಾ ಯೂರೋಪ್ ಮತ್ತು ಅಮೆರಿಕ ಪ್ರವಾಸಿಗರ ನಡುವೆ, ಸಂಪೂರ್ಣವಾಗಿ ಜೋಕರ್ ರೀತಿ ಕಾಣಿಸುತ್ತಿದ್ದೆ. ಚುರುಕಾಗಿ, ನಾನು ನನ್ನ ಭೋಜನ ಮುಗಿಸಿದೆ ಮತ್ತು ಮುಂದಿನ ಏಳು ದಿನಗಳ ಭೋಜನಗಳಿಗಾಗಿ ನನ್ನ ಉಡುಪುಗಳನ್ನು ಸಿದ್ಧಪಡಿಸಲು ಕೊಠಡಿಗೆ ಓಡಿದೆ. ಇಂದಿಗೂ ಸಹ 'ಸ್ಪೋರ್ಟ್ಸ್ ಶೂಗಳು' ಎಂಬ ಪದಗಳು ಅಲಾಸ್ಕಾದಲ್ಲಿನ ನನ್ನ ಅವಲಕ್ಷಣದ ವೇಷವನ್ನು ನೆನಪಿಸುತ್ತವೆ.

ಆದರೆ ಇಂದು, ಸ್ಪೋರ್ಟ್ಸ್ ಶೂಗಳನ್ನು ನನ್ನ ಶಾಶ್ವತ ಜೊತೆಗಾರರೆಂದು ಭಾವಿಸುತ್ತೇನೆ ಏಕೆಂದರೆ ಕಡಿಮೆ ಅವಧಿಯಲ್ಲಿ ಸಿದ್ಧವಾಗಿ ಪ್ರಯಾಣಕ್ಕೆ ಹೊರಡುವ ಅಗತ್ಯವಿದ್ದಾಗ, ಸ್ಪೋರ್ಟ್ಸ್ ಶೂಗಳು, ಜೀನ್ಸ್, ಫಾರ್ಮಲ್/ಸೆಮಿ-ಫಾರ್ಮಲ್ ಟಾಪ್, ವಿಮಾನದ ಒಳಗೆ ಚಳಿಯಿಂದ ರಕ್ಷಿಸಿಕೊಳ್ಳಲು ಸೊಂಟಕ್ಕೆ ಕಟ್ಟಿಕೊಂಡ ಒಂದು ಸ್ವೆಟರ್, ಮತ್ತು ಒಂದು ಸುಮಾರಾದ ಅಳತೆಯ ಹೆಗಲಿಗೆ ನೇತು ಹಾಕಿಕೊಳ್ಳುವ ಪರ್ಸ್, ಅದು ಹಣ, ಪಾಸ್‌ಪೋರ್ಟ್, ಟಿಕೆಟ್, ಮತ್ತು ನನ್ನ ಮೇಕ್-ಅಪ್ ಬಾಕ್ಸ್ ಹಿಡಿಸಿವಷ್ಟು ದೊಡ್ಡದಿದ್ದರೆ ಸಾಕು. ಇವು ನನ್ನ ಆದ್ಯತೆಯ ಉಡುಪು. ಸಂಪೂರ್ಣ ಸ್ವಾತಂತ್ರ್ಯ ಮತ್ತು ಸ್ಟೈಲು ಸಹ.

ನೀವು ಇಡೀ ದಿನ ತಿರುಗಾಡುವ ಅಗತ್ಯವಿದ್ದರೆ ಸದಾ ಮೃದುವಾದ ಸೋಲ್, ಹಗುರ, ಜೊತೆಗೆ ಸ್ವಲ್ಪ ಪುಟಿಯುವ ಸ್ಪೋರ್ಟ್ಸ್ ಶೂಗಳಿಗೆ ಆದ್ಯತೆ ನೀಡಿ. ಅವುಗಳ ಬಣ್ಣ ಕಪ್ಪು, ಗಾಢ ಕಂದು ಅಥವಾ ನೀಲಿ ಇರಲಿ ಅವು ಎಲ್ಲಾ ಉಡುಪುಗಳಿಗೆ ಹೊಂದುತ್ತವೆ.

ಹಲವಾರು ಸಂದರ್ಭಗಳಲ್ಲಿ, ಪ್ರಯಾಣಕ್ಕೆ ಹೊರಡುವ ಮುನ್ನ ನಾವು ಹೊಸ ಚಪ್ಪಲಿಗಳು ಅಥವಾ ಶೂಗಳನ್ನು ಖರೀದಿಸಲು ಬಯಸುತ್ತೇವೆ. ಇದು ಅಪಾಯಕರ, ಏಕೆಂದರೆ ಬಳಕೆ ಅಭ್ಯಾಸವಾಗಿಲ್ಲದ ಕಾರಣ ಅಂತಹ ಹೊಸ ಚಪ್ಪಲಿ, ಶೂಗಳಿಂದ ಕಾಲಿಗೆ ಗಾಯವಾಗಬಹುದು ಅಥವಾ ಅಕ್ಷರಶಃ ಜಾರಿ ಬೀಳಬಹುದು. ಪ್ರಯಾಣ ಪ್ರಾರಂಭಿಸುವ ಮುನ್ನ ಹೊಸ ಪಾದರಕ್ಷೆಗಳನ್ನು ಬಳಸಿ ಅಭ್ಯಾಸ ಮಾಡಿಕೊಳ್ಳುವುದು ಉತ್ತಮ.

ನನ್ನ ಬಾಲ್ಯದ ದಿನಗಳಲ್ಲಿ ಕೇವಲ ಒಂದೇಒಂದು ಜೊತೆ ಚಪ್ಪಲಿಗಳಿದ್ದವು ಮತ್ತು ನಾನು ಶಾಲೆಗೆ ಚಪ್ಪಲಿಗಳನ್ನು ಧರಿಸದೆ ಹೋಗಲು ಬಯಸುತ್ತಿದ್ದೆ. ಒಮ್ಮೆ ನನ್ನ ತಂದೆ ನನಗೋಸ್ಕರ ಒಂದು ಹೊಸ ಜೊತೆ ಚಪ್ಪಲಿಗಳನ್ನು ಖರೀದಿಸಿ ತಂದಿದ್ದರು ಮತ್ತು ನನಗೆ ಚಪ್ಪಲಿಗಳನ್ನು ಧರಿಸಿ ಅಭ್ಯಾಸವಿಲ್ಲದ ಕಾರಣ ಅವುಗಳನ್ನು ನಾನು ಶಾಲೆಯಲ್ಲೇ ಮರೆತು ಬಂದಿದ್ದೆ. ಮರುದಿನ, ಅವು ಹರಿದು ಹೋಗಿದ್ದ ಸ್ಥಿತಿಯಲ್ಲಿ ಪತ್ತೆಯಾದವು, ಅದೇ ದಿನ ನಮ್ಮ ಶಾಲೆಗೆ ಒಂದು ಶಿಬಿರ ಬಂದಿಳಿದಿದ್ದೇ ಇದಕ್ಕೆ ಕಾರಣ. ಆ ದಿನಗಳು ಎಷ್ಟು ಸುಂದರವಾಗಿದ್ದವು ಅವು ನಮ್ಮ ಜೀವಮಾನಕ್ಕೆ ಉಪಯುಕ್ತವಾಗುವ ಪಾಠ ಕಲಿಸಿವೆ.

ಆದರೆ ಚಪ್ಪಲಿಗಳು ಅಥವಾ ಪಾದರಕ್ಷೆಗಳಿಗೆ ಯಾರೇ ಆದರೂ ಪ್ರತ್ಯೇಕ ಬಜೆಟ್ ತೆಗೆದಿರಿಸುವುದನ್ನು ಮರೆಯಬಾರದು ಏಕೆಂದರೆ ನಮ್ಮ ಪಾದರಕ್ಷೆಗಳು ನಮ್ಮ ಪಾದಗಳನ್ನು ಜೀವಮಾನದುದ್ದಕ್ಕೂ ರಕ್ಷಿಸುತ್ತವೆ.

**Veena Patil**
Managing Director-Kesari

ಈ ವರ್ಷ
ದಸರಾ ರಜಾದಿನಗಳು
ಅಗಸ್ಟ್
31ಕ್ಕೆ
ಕೊನೆಯಾಗುತ್ತವೆ!



KESARI
World Class Travel Company

ಕೇಸರಿಯೊಂದಿಗೆ ದಸರಾ ರಜಾದಿನಗಳನ್ನು ಆನಂದಿಸಿ
ಆಗಸ್ಟ್ 31ಕ್ಕೆ ಮುನ್ನ ತ್ವರಿತವಾಗಿ ನಿರ್ಧರಿಸಿ & ರಿಯಾಯಿತಿ ಪಡೆಯಿರಿ
₹3000 ದಿಂದ ₹15000 ವರೆಗೆ

| ಕೋಡ್ | ಪ್ರವಾಸ ಹೆಸರು | ದಿನಗಳು | ದಿನಾಂಕ | ದರ | ರಿಯಾಯಿತಿ ದರ* |
|---|---|---|---|---|---|
| QT | ಥೈಲ್ಯಾಂಡ್ (ಕಾಸ್ಟ್ ಸೇವರ್) | 5 | 10 ಸೆಪ್ಟೆಂಬರ್, 9 ಅಕ್ಟೋಬರ್ | ~~41990~~ | 36990 |
| Q8 | ಸಿಂಗಪುರ್ ಮಲೇಶಿಯಾ (ಕಾಸ್ಟ್ ಸೇವರ್) | 6 | 20 ಸೆಪ್ಟೆಂಬರ್, 8 ಅಕ್ಟೋಬರ್ | ~~61990~~ | 56990 |
| Q3 | ಸಿಂಗಪುರ್ ಥೈಲ್ಯಾಂಡ್ ಮಲೇಷಿಯ (ಕಾಸ್ಟ್ ಸೇವರ್) | 8 | 3 ಸೆಪ್ಟೆಂಬರ್, 8 ಅಕ್ಟೋಬರ್ | ~~74990~~ | 64990 |
| Q4 | ಸಿಂಗಪುರ್ ಥೈಲ್ಯಾಂಡ್ ಮಲೇಷಿಯ (ಕಾಸ್ಟ್ ಸೇವರ್) | 10 | 27 ಸೆಪ್ಟೆಂಬರ್ | ~~78990~~ | 68990 |
| Q2 | ಸಿಂಗಪುರ್ ಥೈಲ್ಯಾಂಡ್ ಮಲೇಷಿಯ ಹಾಂಕಾಂಗ್ (ಕಾಸ್ಟ್ ಸೇವರ್) | 13 | 8,29 ಅಕ್ಟೋಬರ್ | ~~102990~~ | 92990 |
| AA | ಆಸ್ಟ್ರೇಲಿಯನ್ ಎಸ್ಕೇಪ್ | 12 | 2 ಅಕ್ಟೋಬರ್ | ~~227990~~ | 218990 |

*Terms & Conditions Apply. Advt.

All International Tours are Ex-Bengaluru departures.

Bengaluru: 4128 2222 • www.kesari.in • Email: sales@kesari.in
SMS: KESARI <space> your message to 56677 • Toll free: 1800 22 1100